ಶ್ರೀ ಪಿ.ಆರ್. ರಮೇಶ್, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಶ್ರೀಕಂಠೇಗೌಡ, ಶ್ರೀ ಮರಿತಿಬ್ಬೇಗೌಡ, ಶ್ರೀ ಶರಣಪ್ಪ ಮಟ್ಟೂರು ಹಾಗೂ ಶ್ರೀ ಆರ್. ಚೌಡರೆಡ್ಡಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ

## ಸೂಚನೆ

"2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ 362 ಹುದ್ದೆಗಳ ನೇಮಕಾತಿಯಲ್ಲಿ ಆದ ವಿಳಂಬದ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶ ದಿ: 19.10.2016ರ ಅನುಗುಣವಾಗಿ, ರಾಜ್ಯ ಸಚಿವ ಸಂಪುಟ ಸಭೆಯ ನಿರ್ಣಯ ಸಂಖ್ಯೆ: ಸಿ. 149/2017, ದಿ: 01.03.2017 ಮತ್ತು ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶ ದಿ: 09.03.2018ರ ಅನುಗುಣವಾಗಿ ಅಡ್ವೋಕೇಟ್ ಜನರಲ್ ರವರ ದಿ: 22.10.2019ರ ಅಭಿಪ್ರಾಯದ ಹಿನ್ನೆಲೆಯಲ್ಲಿ, ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಹಲವು ದಾಖಲೆಗಳನ್ನು ಆಧರಿಸಿ ಸಂವಿಧಾನದ ಅನುಚ್ಛೇದ 323 (2)ರ ಸ್ಪಷ್ಟ ಉಲ್ಲಂಘನೆ ಆಗಿರುವ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇವೆ."

---

## ಹೇಳಿಕೆ

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ಅವ್ಯವಹಾರಗಳ ಆರೋಪದ ಬಗ್ಗೆ ಸಿ.ಐ.ಡಿ ನೀಡಿರುವ ವರದಿ, ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ಆಯೋಗಕ್ಕೆ ಕೋರಲಾದ ಪತ್ರಗಳನ್ನು ದಿ: 14.08.2014ರಂದು ಸರ್ಕಾರಿ ಆದೇಶದಲ್ಲಿ ಹಿಂಪಡೆದುದರಿಂದ ನೇಮಕಾತಿ ಪ್ರಕ್ರಿಯೆ ಇಲ್ಲವಾಗಿದೆ.

ದಿ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಕೆಲವು ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ: 6268-6395/2014 ಮತ್ತು ಇನ್ನಿತರೆ ಅರ್ಜಿಗಳಲ್ಲಿ ಮಾನ್ಯ ನ್ಯಾಯಮಂಡಳಿಯು ನೀಡಿದ ದಿ: 19.10.2016ರ ತೀರ್ಪಿನಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರ ನಿಯಮ 11(3)ರನ್ವಯ ನೇಮಕಾತಿ ಆದೇಶ ನೀಡಲು ನಿರ್ದೇಶನ ನೀಡಿ, ದಿ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಿದೆ.

2014-15ರ ಸಾಲಿನ ಕರ್ನಾಟಕ ಲೋಕಸೇವಾ ಆಯೋಗದ ವಾರ್ಷಿಕ ವರದಿಯಲ್ಲಿ ಸರ್ಕಾರವು ಸಿ.ಐ.ಡಿ ನೀಡಿರುವ ವರದಿ, ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿ 2011ರ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಪ್ರಕ್ರಿಯೆಯನ್ನು ಪರಿಗಣಿಸದೆ ಮುಕ್ತಾಯಗೊಳಿಸಿದೆ. ಆದರೆ ಮಾನ್ಯ ಕೆ.ಎ.ಟಿಯಲ್ಲಿ ತಡೆಯಾಜ್ಞೆ ನೀಡಿದ್ದು, ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ ಎಂದು ಟಿಪ್ಪಣಿಯನ್ನು (ವಾರ್ಷಿಕ ವರದಿಯ ಪುಟ-125) ಉಭಯ ಸದನಗಳ ಮುಂದೆ ಮಂಡಿಸಲಾಗಿತ್ತು. ಸಂವಿಧಾನದ ಅನುಚ್ಛೇಧ 323(2)ರಂತೆ ಆಯೋಗದ ಸಲಹೆಯನ್ನು ಸರ್ಕಾರವು ಒಪ್ಪಿಕೊಳ್ಳದೆ ಇರುವ ಪ್ರಕರಣಗಳು ಇದ್ದಲ್ಲಿ, ಹಾಗೆ ಒಪ್ಪಿಕೊಳ್ಳದಿರಲು ಕಾರಣಗಳ ವಿವರಣಾ ಪತ್ರದೊಂದಿಗೆ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದಿಡಬೇಕಾಗಿರುತ್ತದೆ.

ಕರ್ನಾಟಕ ಲೋಕಸೇವಾ ಆಯೋಗವು ವಾರ್ಷಿಕ ವರದಿಯನ್ನು ಕಳುಹಿಸಿದ ಅವಧಿ ಮತ್ತು ಸರ್ಕಾರವು ಮಾನ್ಯ ವಿಧಾನ ಮಂಡಲದಲ್ಲಿ ಮಂಡಿಸಿದ ಅವಧಿಯ ಮಧ್ಯಂತರದಲ್ಲಿ ಮಾನ್ಯ ಕೆ.ಎ.ಟಿ.ಯು 2011ನೇ

ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ಆಯೋಗಕ್ಕೆ ಕೋರಲಾದ ಪತ್ರಗಳನ್ನು ಹಿಂಪಡೆದು ನೇಮಕಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದ್ದ ದಿ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಿರುತ್ತದೆ. ಮಾನ್ಯ ವಿಧಾನ ಮಂಡಲದಲ್ಲಿ ಆಯೋಗದ ವಾರ್ಷಿಕ ವರದಿಯನ್ನು ಮಂಡಿಸುವ ಸಂದರ್ಭದಲ್ಲಿ ಸರ್ಕಾರವು ಮಾನ್ಯ ಕೆ.ಎ.ಟಿ.ಯ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿರಲಿಲ್ಲ. ಅಲ್ಲದೇ, ಸರ್ಕಾರವು ಆಯೋಗದ ಪ್ರಸ್ತಾವನೆಯನ್ನು ತಿರಸ್ಕರಿಸುವ ನಿರ್ಧಾರವನ್ನೂ ಸಹ ತೆಗೆದುಗೊಂಡಿರಲಿಲ್ಲ. ಆಯ್ಕೆ ಪ್ರಕ್ರಿಯೆ ಜರುಗಿಸಲು ಆಯೋಗಕ್ಕೆ ಕಳುಹಿಸಲಾಗಿದ್ದ ಪತ್ರಗಳನ್ನು ಹಿಂಪಡೆದಿದ್ದ ದಿ: 14.08.2014ರ ಸರ್ಕಾರದ ಆದೇಶವು ಆ ಸಂದರ್ಭದಲ್ಲಿ ಕಾನೂನಾತ್ಮಕವಾಗಿ ಸಿಂಧುವಾಗಿರಲಿಲ್ಲ. ಹೀಗಾಗಿ, ಆಯೋಗದ ಪ್ರಸ್ತಾವವನ್ನು ಒಪ್ಪದಿರುವ ಕುರಿತು ಕಾರಣಗಳೊಂದಿಗೆ ವಿವರಣಾ ಪತ್ರವನ್ನು ಸಲ್ಲಿಸುವ ಸನ್ನಿವೇಶ ಉದ್ಭವಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಪ್ರಸ್ತಾವ/ಸಲಹೆಯನ್ನು ಸ್ವಯಂ ತಿರಸ್ಕರಿಸಿಲ್ಲದ ಕಾರಣ ಇದು ಅನುಚ್ಛೇಧ 323(2)ರಡಿಯಲ್ಲಿ ಒಳಪಡುವುದಿಲ್ಲ. ಆದುದರಿಂದ, ಸಂವಿಧಾನದ ಅನುಚ್ಛೇದ 323(2)ರ ಉಲ್ಲಂಘನೆ ಆಗಿರುವುದಿಲ್ಲ.

ಬಿ.ಎಸ್. ಯಡಿಯೂರಪ್ಪ

**ಕಡತ ಸಂಖ್ಯೆ: ಸಿಆಸುಇ 09 ಎಸ್‌ಎಸ್‌ಸಿ 2020**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ